**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿವಿಲ್ ಮಿಸ್ ನಂಃ1/2024**

**ಪಿ ಡಬ್ಲ್ಯೂಃ1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 28.07.2025**

**ಪಾಟೀ ಸವಾಲುಃ ಶ್ರೀ ಸಿ ಎಮ್ ಕೆ ವಕೀಲರಿಂದ 1 ರಿಂದ 4 ನೇ ಎದುರುದಾರರ ಪರ ವಕೀಲರುಃ**

1. ಈ ಅರ್ಜಿಯನ್ನು ನಾನೇ ನನ್ನ ಹಿರಿಯ ಸೋದರ ಮಾವನ ಮಗನಾದ ಧರ್ಮಣ್ಣ ಇವರ ವಿರುದ್ಧ ದಾಖಲಿಸಿದ್ದೇನೆ. ಈ ಅರ್ಜಿ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿ ನಾನೇ ನೀಡಿರುತ್ತೇನೆ. ನಾನು ಈ ಅರ್ಜಿಯನ್ನು ಧರ್ಮಣ್ಣ ಇವರು ಒಳ ಹೋಕ್ಕು ಹೊಡೆದ ಬಗ್ಗೆ ದಾಖಲಿಸಿದ್ದೇನೆ.

2. ಈ ಅರ್ಜಿ ದಾಖಲಿಸುವ ಮುನ್ನ ನಾನು ಈ ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ದಾಖಲಿಸಿರುವುದಿಲ್ಲ. ಅಸಲು ದಾವಾ ಸಂಃ47/2020 ನ್ನು ನಾನೇ ದಾಖಲಿಸಿದ್ದೆ. ಅದನ್ನು ಮನೆ ಸಂಬಂಧ ಹಾಕಿದ್ದೆ, ನಾನು ಶಾಲೆ ಕಲಿಯದ ಕಾರಣ ನನಗೆ ಮನೆ ನಂಬರ ಹೇಳಲಾಗುವುದಿಲ್ಲ. ಆ ದಾವೆಯಲ್ಲಿ ಪ್ರತಿವಾದಿಯರು ಹಾಜರಾಗಿ ತಕರಾರು ಸಲ್ಲಿಸಿದ್ದರು. ಆ ದಾವೆಯಲ್ಲಿ ಸಾಕ್ಷಿ ನಡೆದಿತ್ತು. ನಾನು ಪ್ರತಿ ಮುದ್ದತ್ತಿಗೆ ನ್ಯಾಯಾಲಯಕ್ಕೆ ಬರುತಿದ್ದೆ. ನಾನು ದಿಃ07.02.2024 ರಂದು ನ್ಯಾಯಾಲಯದಲ್ಲಿ ಹಾಜರು ಇದ್ದೆ.

3. ದಿಃ07.02.2024 ರಂದು ಆ ದಾವೆಯಲ್ಲಿ ನನ್ನ ಸಾಕ್ಷಿ ನಡೆಯಿತು. ನಮ್ಮ ವಕೀಲರು ಸಾಕ್ಷಿ ಮಾಡಿಸಿದ್ದು ಹಾಗೂ ಎದುರುದಾರರ ವಕೀಲರು ಪ್ರಶ್ನೆ ಸಹ ಮಾಡಿರುತ್ತಾರೆ. ಈ ರೀತಿ ಸಾಕ್ಷಿ ಆದ ನಂತರ ಮುಂದಿನ ಮುದ್ದತ್ತು ಯಾವ ದಿನಾಂಕ ಹೋಯಿತು ಅಂತ ಹೇಳಲಾಗುವುದಿಲ್ಲ. ಸದರಿ ದಾವೆ ಕಿತ್ತು ಹೋಗಿರುವ ಬಗ್ಗೆ ನನಗೆ ಗೊತ್ತಿಲ್ಲ. ದಿಃ07.02.2024 ರ ನಂತರ ನಾನು ಮುದ್ದತ್ತಿಗೆ ಬಂದಿರುವುದಿಲ್ಲ.

4. ನನ್ನ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ನನಗೆ ಆರಾಮ ಇರಲಿಲ್ಲ ಅಂತ ಬರೆಸಿದ್ದು, ಆ ರೀತಿ ನಿಮಗೆ ಯಾವ ದಿನಾಂಕದಂದು ಆರಾಮ ಇರಲಿಲ್ಲ ಎಂದರೆ ಸಾಕ್ಷಿ ನನ್ನ ಮಗನಿಗೆ ಆರಾಮ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗನ ಹೆಸರು ಸಿದ್ದಪ್ಪ. ಮನೆಗೋಸ್ಕರ ನನ್ನ ಮಗನಿಗೆ ಹೊಟ್ಟೆಬ್ಯಾನೆ ಹತಸಿಕೊಂಡಿದ್ದ, ನನ್ನ ಮಗನಿಗೆ ಜ್ವರ ಬಂದಿತ್ತು ಎಂದು ನುಡಿಯುತ್ತಾರೆ. ನನ್ನ ಮಗನಿಗೆ ಕುಂದಗೋಳ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುತ್ತೇವೆ. ಚಿಕಿತ್ಸೆ ಕೊಡಿಸಿದ

ದಿನಾಂಕದಂದು ನ್ಯಾಯಾಲಯದಲ್ಲಿ ದಾವೆಯ ಮುದ್ದತ್ತ ಇತ್ತು. ಆ ದಿನ ಕುಂದಗೋಳಕ್ಕೆ ಬಂದವರು ನ್ಯಾಯಾಲಯಕ್ಕೆ ಯಾಕೆ ಬರಲಿಲ್ಲ ಎಂದರೆ ಸಾಕ್ಷಿ ನನ್ನ ಮಗನಿಗೆ ಬಹಳ ಆರಾಮ ಇರಲಿಲ್ಲ ಎಂದು ನುಡಿಯುತ್ತಾರೆ. ಮಗನಿಗೋಸ್ಕರ ನಾನೇ ಓಡಾಡಿ ಔಷಧಿ ಎಲ್ಲಾ ಕೊಡಿಸಿರುತ್ತೇನೆ. ನನ್ನ ಮಗನಿಗೆ ಆರೋಗ್ಯ ಸರಿ ಇಲ್ಲದ ಕಾರಣ ದಾವಾ ಇದ್ದ ದಿನಾಂಕ ನಾನು ನ್ಯಾಯಾಲಯಕ್ಕೆ ಬಂದಿರಲಿಲ್ಲ. ಆ ದಿನ ನಾನು ನ್ಯಾಯಾಲಯಕ್ಕೆ ಬರದ ಕಾರಣ ದಾವೆ ಕಿತ್ತು ಹೋಗಿರುತ್ತದೆ.

5. ನನ್ನ ಮಗನಿಗೆ ಆಸ್ಪತ್ರೆಗೆ ತೋರಿಸಿರುವ ಬಗ್ಗೆ ದಾಖಲೆಗಳು ಇರುವುದಿಲ್ಲ. ನನ್ನ ಮಗ ಸರಕಾರಿ ಆಸ್ಪತ್ರೆ ಕುಂದಗೋಳದಲ್ಲಿ ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದು ಮಾರನೆ ದಿನ ಮನೆಗೆ ವಾಪಾಸ್ಸು ಹೋಗಿರುತ್ತೇನೆ. ಸರಕಾರಿ ಆಸ್ಪತ್ರೆಯಲ್ಲಿ ದಾಖಲೆಗಳು ದೊರೆಯುತ್ತವಾ ಎಂದರೆ ಸಾಕ್ಷಿ ಅದು ನಮ್ಮ ತಲೆಯಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗನಿಗೆ ಆರಾಮ ಇರಲಿಲ್ಲ, ಅವನಿಗೆ ದವಾಖಾನೆಗೆ ತೋರಿಸಲ ಹೋಗಿದ್ದರಿಂದ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯ ಆಗಿರಲಿಲ್ಲ ಎಂದು ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

6. ನಾನು ಮತ್ತು ನನ್ನ ಮಗ ಯಾವತ್ತೂ ಸಹ ಆರಾಮವಾಗಿ ಇದ್ದೇವೆ ಎಂದರೆ ಸರಿ. ನಾವು ದಾವೆಯಲ್ಲಿ ಹಾಜರಾದರು ಸಹ ಅದು ನಮ್ಮ ಪರವಾಗಿ ಆಗುವುದಿಲ್ಲ ಅಂತ ತಿಳಿದು ನಾವು ಉದ್ದೇಶಪೂರ್ವಕವಾಗಿ ಆ ದಾವೆಯಲ್ಲಿ ಗೈರು ಹಾಜರಾಗಿದ್ದೇವು ಎಂದರೆ ಸರಿಯಲ್ಲ. ಆ ದಾವೆಯ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಆ ಸುಳ್ಳು ದಾವೆಯನ್ನು ದಾಖಲಿಸಿದ್ದೇವು ಎಂದರೆ ಸರಿಯಲ್ಲ. ಈಗ ಆ ಸುಳ್ಳು ದಾವೆಗೆ ಅನುಗುಣವಾಗಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಈ ಅರ್ಜಿ ವಜಾ ಮಾಡಿದರೆ ನಮಗೆ ತೊಂದರೆ ಇರುವುದಿಲ್ಲ ಎಂದರೆ ಸರಿ. ನಾನು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**